ಕರ್ನಾಟಕ ಸರ್ಕಾರ

(ಕೃಷಿ ಇಲಾಖೆ)

ಸಂ:ಉಕೃನಿ/ಸಸಂ/ತಾಂ/ಕೀ.ಮಾ.ಪ.ಸ್ಪ/2021-22

ಕೃಷಿ ಆಯುಕ್ತರ ಕಾರ್ಯಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು,
ದಿನಾಂಕ: 29.07.2021

ಇವರಿಗೆ,

ಜಂಟಿ ಕೃಷಿ ನಿರ್ದೇಶಕರು
ಬೆಳಗಾವಿ

ವಿಷಯ: ಕೀಟನಾಶಕ ಮಾರಾಟ ಪರವಾನಗಿ ನೀಡಲು ಸ್ಪಷ್ಟೀಕರಣ ಕುರಿತು.

ಉಲ್ಲೇಖ: 1. ಈ ಕಚೇರಿ ಪತ್ರ ಸಂಖ್ಯೆ: ಸಸಂವಿ/ತಾಂ-1/ಕೀ.ಮಾ.ಪ.ಕು/2016-17, ದಿನಾಂಕ:31.01.2018.

2. ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ G.S.R. 106(E) ದಿನಾಂಕ 01.02.2017

******

ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ. ರವಿ ರುಜಾಯ ಮಸ್ಕರೇನ್, ಬೆಳಗಾವಿ ಇವರು ಯು.ಜಿ.ಸಿ. ಯಿಂದ ಮಾನ್ಯತೆ ಪಡೆದ Yashwantrao Chavan Maharashtra Open University (YCMOU), Nashik, Maharashtra ಇಲ್ಲಿ ಬಿ.ಎಸ್ಸಿ ತೋಟಗಾರಿಕೆ ಪದವಿಯನ್ನು ಹೊಂದಿದ್ದು, ಕೀಟನಾಶಕ ಮಾರಾಟ ಪರವಾನಗಿ ಕೋರಿ ಅರ್ಜಿ ಸಲ್ಲಿಸಿದ್ದು, ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಇ-ಮೇಲ್ ಮೂಲಕ ಸ್ಪಷ್ಟೀಕರಣ ಕೋರಿರುತ್ತಾರೆ.

ಕೀಟನಾಶಕ ತಿದ್ದುಪಡಿ ನಿಯಮ 2017ರ ಆದೇಶ ಸಂಖ್ಯೆ G.S.R. 106(E) ದಿನಾಂಕ 01.02.2017ರನ್ವಯ ವಿದ್ಯಾರ್ಹತೆಯನ್ನು ಮಂಜೂರು ಮಾಡಲು ಅರ್ಹವಿರುವ ಕೃಷಿ ಅಥವಾ ತೋಟಗಾರಿಕೆ ವಿಶ್ವ ವಿದ್ಯಾಲಯಗಳ ಅಥವಾ ಕೇಂದ್ರ ಸರ್ಕಾರದ ಕೃಷಿ ಸಂಬಂಧಿಸಿದ ಸಂಸ್ಥೆಗಳು ನೀಡುವ ಒಂದು ವರ್ಷದ ಅಥವಾ ಅದಕ್ಕಿಂತ ಮೇಲ್ಪಟ್ಟ ಅವಧಿಯ ಕೃಷಿ ಅಥವಾ ತೋಟಗಾರಿಕಾ ವಿಷಯದಲ್ಲಿ ಡಿಪ್ಲೋಮಾ ವಿದ್ಯಾರ್ಹತೆಯನ್ನು ಕೀಟನಾಶಕ ಮಾರಾಟ ಪರವಾನಗಿ ನೀಡಲು ಪರಿಗಣಿಸಲಾಗುತ್ತಿದೆ. ಕೃಷಿ ಮತ್ತು ತೋಟಗಾರಿಕೆ ವಿಶ್ವ ವಿದ್ಯಾಲಯಗಳು ಅಥವಾ ಕೇಂದ್ರ ಸರ್ಕಾರದ ಕೃಷಿ ಸಂಬಂಧಿಸಿದ ಅಂಗೀಕೃತ ಸಂಸ್ಥೆಗಳು ಹೊರತುಪಡಿಸಿ ಬೇರೆ ವಿಶ್ವವಿದ್ಯಾಲಯಗಳು/ಸಂಸ್ಥೆಗಳು ನೀಡುವ ಕೃಷಿ ಅಥವಾ ತೋಟಗಾರಿಕಾ ಡಿಪ್ಲೋಮಾ ವಿದ್ಯಾರ್ಹತೆಯನ್ನು ಕೀಟನಾಶಕ ಮಾರಾಟ ಪರವಾನಿಗೆ ನೀಡಲು ಪರಿಗಣಿಸುವಂತಿಲ್ಲ ಎಂಬ ಮಾಹಿತಿಯನ್ನು **ಉಲ್ಲೇಖ-1 ರ ಸುತ್ತೋಲೆ ಮೂಲಕ ನೀಡಲಾಗಿದ್ದರೂ** ಸಹ ಪದೇ ಪದೇ ಸ್ಪಷ್ಟೀಕರಣ ಕೋರಲಾಗುತ್ತಿದೆ.

ಆದುದರಿಂದ ಕೃಷಿ ಪದವಿ ಅಥವಾ ಡಿಪ್ಲೋಮಾ ಕೋರ್ಸ್ ನೀಡಲು ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ, ನವದೆಹಲಿ ಅಥವಾ ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳಿಂದ ಅಂಗೀಕಾರ ಪಡೆಯುವುದು ಕಡ್ಡಾಯವಾಗಿರುತ್ತದೆ. ಈ ಹಿನ್ನಲೆಯಲ್ಲಿ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ, ಅಥವಾ ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳಿಂದ ಅಂಗೀಕಾರ ಪಡೆದಿದ್ದಲ್ಲಿ ಮಾತ್ರ ಪರಿಗಣಿಸಲು ಮತ್ತೊಮ್ಮೆ ತಿಳಿಸಿದೆ.

(ಕೃಷಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಕೃಷಿ ನಿರ್ದೇಶಕರು

ಪ್ರತಿಯನ್ನು ಶ್ರೀ. ರವಿ ರುಜಾಯ ಮಸ್ಕರೇನ್, ಸಿಟಿಎಸ್ ಸಂ. 5988, ಮ. ಸಂ. 101, ಹರಿಕೃಪಾ ಅಪಾರ್ಟ್ ಮೆಂಟ್, ಎಂ.ಜಿ. ಕಾಲೋನಿ, ಟಿಳಕವಾಡಿ, ಬೆಳಗಾವಿ-590006 ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

D:\DATA\RAM\LETTERS\LETTER TO DISTRICTS\LETTERS TO DISTRICTS_2020.DOC

EK640327373IN

ಕರ್ನಾಟಕ ಸರ್ಕಾರ

(ಕೃಷಿ ಇಲಾಖೆ)

ಕೃಷಿ ಆಯುಕ್ತರ ಕಾರ್ಯಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು.
ದಿನಾಂಕ: 31-01-2018

ಸಂ :ಸಸಂವಿ/ತಾಂ-1/ಕೀ.ಮಾ.ಪ.ಕು/2016-17

ಕೃಷಿ ಆಯುಕ್ತರ ಕಛೇರಿ
14 MAR 2018
ಶೇಷಾದ್ರಿ ರಸ್ತೆ, ಬೆಂಗಳೂರು - 01.

10488

ಇವರಿಗೆ,

ಜಂಟಿ ಕೃಷಿ ನಿರ್ದೇಶಕರು
ಬಾಗಲಕೋಟೆ

ವಿಷಯ: ಕೀಟನಾಶಕ ಮಾರಾಟ ಪರವಾನಗಿ ನೀಡಿಕೆಗೆ ವಿದ್ಯಾರ್ಹತೆ ಕುರಿತು.

ಉಲ್ಲೇಖ: 1 ನಿಮ್ಮ ಪತ್ರ ಸಂಖ್ಯೆ:ಜಂಕೃನಿಬಾ/ತಾಂ-1/ಕೀ.ಪ/ಪರವಾನಗಿ/ಮಾರ್ಗದರ್ಶನ/ 2895/2017-18 ದಿನಾಂಕ 22-01-2018

2. ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ G.S.R. 106(E) ದಿನಾಂಕ 01-02-2017

********

ವಿಷಯಕ್ಕೆ ಸಂಬಂಧಿಸಿದಂತೆ, ಕೀಟನಾಶಕ ಮಾರಾಟ ಪರವಾನಗಿ ಪಡೆಯಲು ಮಾರಾಟಗಾರರು MANAGE ಸಂಸ್ಥೆಯವರು ನೀಡಿರುವ ಒಂದು ವರ್ಷದ Diploma in Agricultural Extension Services for Input Dealers (DAESI) ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರವನ್ನು ಪರವಾನಗಿ ನೀಡಲು ಪರಿಗಣಿಸುವ ಬಗ್ಗೆ ಅಭಿಪ್ರಾಯವನ್ನು ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತೀರಿ.

ಕೀಟನಾಶಕ ತಿದ್ದುಪಡಿ ನಿಯಮ 2017ರ ಆದೇಶ ಸಂಖ್ಯೆ G.S.R. 106(E) ದಿನಾಂಕ 01-02-2017 ರನ್ವಯ ವಿದ್ಯಾರ್ಹತೆಯನ್ನು ಮಂಜೂರು ಮಾಡಲು ಅರ್ಹವಿರುವ ಕೃಷಿ, ತೋಟಗಾರಿಕೆ ವಿಶ್ವ ವಿದ್ಯಾಲಯಗಳ ಅಥವಾ ಕೇಂದ್ರ ಸರ್ಕಾರದ ಕೃಷಿ ಸಂಬಂಧಿಸಿದ ಸಂಸ್ಥೆಗಳು ನೀಡುವ ಒಂದು ವರ್ಷದ ಅಥವಾ ಅದಕ್ಕಿಂತ ಮೇಲ್ಪಟ್ಟ ಅವಧಿಯ ಕೃಷಿ ಅಥವಾ ತೋಟಗಾರಿಕಾ ವಿಷಯದಲ್ಲಿ ಡಿಪ್ಲೋಮಾ ವಿದ್ಯಾರ್ಹತೆಯನ್ನು ಕೀಟನಾಶಕ ಮಾರಾಟ ಪರವಾನಿಗೆ ನೀಡಲು ಪರಿಗಣಿಸಬಹುದಾಗಿದೆ. MANAGE ಸಂಸ್ಥೆಯವರು ನೀಡಿರುವ ಒಂದು ವರ್ಷದ Diploma in Agricultural Extension Services for Input Dealers (DAESI) ವಿಷಯವು ಅಧಿಸೂಚನೆಯಲ್ಲಿ ತಿಳಿಸಿರುವ ಪಠ್ಯಕ್ರಮಗಳನ್ನು ಒಳಗೊಂಡಿದ್ದಲ್ಲಿ ಕೀಟನಾಶಕ ಮಾರಾಟ ಪರವಾನಿಗೆ ನೀಡಲು ಪರಿಗಣಿಸಬಹುದಾಗಿದೆ. ಕೃಷಿ ಮತ್ತು ತೋಟಗಾರಿಕೆ ವಿಶ್ವ ವಿದ್ಯಾಲಯಗಳು ಅಥವಾ ಕೇಂದ್ರ ಸರ್ಕಾರದ ಕೃಷಿ ಸಂಬಂಧಿಸಿದ ಅಂಗೀಕೃತ ಸಂಸ್ಥೆಗಳು ಹೊರತುಪಡಿಸಿ ಬೇರೆ ವಿಶ್ವವಿದ್ಯಾಲಯಗಳು/ಸಂಸ್ಥೆಗಳು ನೀಡುವ ಕೃಷಿ ಅಥವಾ ತೋಟಗಾರಿಕಾ ಡಿಪ್ಲೋಮಾ ವಿದ್ಯಾರ್ಹತೆಯನ್ನು ಕೀಟನಾಶಕ ಮಾರಾಟ ಪರವಾನಗಿ ನೀಡಲು ಪರಿಗಣಿಸುವಂತಿಲ್ಲ.

ಕೃಷಿ ನಿರ್ದೇಶಕರು